

ಪೊಲೀಸ್: ಮನೆಯಲ್ಲಿ ಯಾರೂ ಇಲ್ಲವೆಂದು ನಿನಗೆ ಹೇಗೆ ತಿಳಿಯಿತು?

ಕಳ್ಳ: ಕುಟುಂಬದ ಎಲ್ಲಾ 15 ಸದಸ್ಯರ ಫೋಟೋ ಸಹಿತ ಫೇಸ್‌ಬುಕ್‌ನಲ್ಲಿ ಅಪ್‌ಡೇಟ್ ಹಾಕಲಾಗಿತ್ತು.

‘1 ವಾರದ ತನಕ ಗೋವಾದಲ್ಲಿ ಮಜಾ ಮಾಡುತ್ತಿದ್ದೇವೆ’! ಅಂತ

★★★

ಗೋಪಿ: ಇವತ್ತು ನಿನ್ನ ಕೈಯಿಂದ ಚಹಾ ಮಾಡು ಕಣೆ, ಅದನ್ನು ಕುಡಿದಾಕ್ಷಣ ತನುಮನವೆಲ್ಲಾ ಮತ್ತೇರಿ ಮೈ ಮುರಿಯುವಂತಾಗಬೇಕು. ಹೃದಯ ಉಲ್ಲಾಸದಿಂದ ಕುಣಿದಾಡಬೇಕು.

ರತ್ನಾ: ರೀ... ನೀವು ತರಿಸುವ ಹಾಲು ಎಮ್ಮೆಯದ್ದು, ನಾಗರ ಹಾವಿನದ್ದಲ್ಲ!

★★★

ಸ್ಮಶಾನದಲ್ಲಿ 4 ತಲೆಬುರುಡೆಗಳು ಬಿದ್ದಿದ್ದವು.

ನಾಯಿಯೊಂದು ಅವುಗಳಲ್ಲಿ 3 ಬುರುಡೆಗಳನ್ನು ನೆಕ್ಕುತ್ತಿತ್ತು. ಆದರೆ ಒಂದರ ಸನಿಹ ಕೂಡಾ ಸುಳಿಯುತ್ತಿರಲಿಲ್ಲ.

ಇದನ್ನು ನೋಡಿದ ದಾರಿಹೋಕ ನರಿ ‘ಅದನ್ನೊಂದನ್ನೇಕೆ ನೆಕ್ಕುತ್ತಿಲ್ಲ’ವೆಂದು ವಿಚಾರಿಸಿತು.

ನಾಯಿ: ಅದು ವಿವಾಹಿತ ಪುರುಷನ ತಲೆ! ಅದನ್ನು ಆತನ ಪತ್ನಿ ಈಗಾಗಲೇ ಪೂರ್ತಿ ತಿಂದಾಗಿದೆ!

★★★

ಪತ್ನಿ: ಯಾಕ್ರೀ ಡ್ರಿಂಕ್ಸ್ ಮಾಡಿ ಹಣ ವ್ಯರ್ಥವಾಗಿಸ್ತೀದ್ದೀರಾ...?

ಪತಿ: ನೀನೇಕೆ ಬ್ಯೂಟಿ ಪಾರ್ಲರ್‌ಗಳಿಗೆ ಹಣ ಸುರಿಯುತ್ತಿರುವೆ...?

ಪತ್ನಿ: ಅದು ನಿಮಗಾಗಿಯೇ ಕಣ್ರೀ... ನಿಮ್ಮ ಕಣ್ಣಿಗೆ ನಾನು ಸುಂದರಾಂಗಿಯಾಗಿ ಗೋಚರಿಸಲೆಂದು...

ಪತಿ: ನಾನು ನಿನಗಾಗಿಯೇ ಕುಡಿಯುತ್ತಿದ್ದೇನೆ ಕಣೆ. ಆಗಲಾದರೂ ನನ್ನ ದೃಷ್ಟಿಗೆ ನೀನು ಸುಂದರಿಯಾಗಿ ಕಾಣಲೆಂದು....!

★★★

ರತ್ನಾ: ರೀ ಗಂಡಸರು ಸತ್ತ ನಂತರ ಸ್ವರ್ಗದಲ್ಲಿ ಅಪ್ಸರ ಕನ್ಯೆಯರು ಸಿಗುತ್ತಾರೆಂದು ಹಿರಿಯರು ಹೇಳುತ್ತಾರೆ. ಹೆಂಗಸರು ಸತ್ತರೆ ಯಾರು ಸಿಗುತ್ತಾರೆ?

ಗೋಪಿ: (ಹೀಯಾಳಿಕೆಯ ದನಿಯಲ್ಲಿ) ಕಪಿಗಳು ಸಿಗುತ್ತಾರೆ....

ರತ್ನಾ: (ಹತಾಶಳಾಗಿ) ಇದು ದೇವರು ಮಾಡುವ ಅನ್ಯಾಯವಲ್ಲವೆ? ನಿಮಗೆ ಇಲ್ಲಿಯೂ ಅಪ್ಸರ ಕನ್ಯೆ, ಅಲ್ಲಿಯೂ ಅಪ್ಸರ ಕನ್ಯೆ; ನನಗೆ ಇಲ್ಲಿಯೂ ಕಪಿ, ಅಲ್ಲಿಯೂ ಕಪಿ...!

(ಸಂಗ್ರಹ) **ರಮಣ್ ಶೆಟ್ಟಿ ರೆಂಜಾಳ್, ಮುಂಬೈ**




